ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಉಡುಪಿ.

ಸಿ.ಸಿ.:2172/2023
ಸಿ.ಡಬ್ಲ್ಯು. 5 ಪಿ.ಡಬ್ಯೂ : 8

ಸಾಕ್ಷಿದಾರರ ಹೆಸರು	ಬಿ ಎನ್ ಪ್ರಕಾಶ್
ತಂದೆಯ ಹೆಸರು	ಲಕ್ಷ್ಮಣ ಆಚಾರ್
ವಯಸ್ಸು	56 ವರ್ಷ
ಉದ್ಯೋಗ	ಅಕ್ಕಸಾಲಿಗ
ವಾಸಸ್ಥಳ	ತೀರ್ಥಹಳ್ಳಿ

ದಿನಾಂಕಃ 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ಉಷಾ ಜ್ಯುವೆಲ್ಲರ್ಸ್ ಎಂಬ ನನ್ನ ಅಂಗಡಿಯು ಬಿದಿರುಗೋಡಿನಲ್ಲಿ ಇದೆ. ಸುದರ್ಶನ್ ಎಂಬ ಆರೋಪಿಯವರನ್ನು ನಾನು ನೋಡಿರುತ್ತೇನೆ. 2004 ರಲ್ಲಿ ಸುದರ್ಶನರವರು ಮನೆಯ ನೊಂದಣಿ ಆಗಬೇಕೆಂದು ಹಣದ ಅವಶ್ಯಕತೆ ಇದೆ ಎಂದು ಚಿನ್ನಾಭರಣಗಳನ್ನು ತೆಗೆದುಕೊಂಡು ಹಣ ನೀಡಿ ಎಂದು 2 ಬಾರಿ ಕೇಳಿದ್ದರು. ಅವರು ಕೇಳಿಕೊಂಡಂತೆ ಚಿನ್ನಾಭಾರಣಗಳನ್ನು ಖರೀದಿ ಮಾಡಿ ಪ್ರತೀ ಗ್ರಾಂಗೆ ರೂ 350 ರಂತೆ ಹಣವನ್ನು ನೀಡಿದೆನು. ಸುಮಾರು 1 ವರುಷದ ನಂತರ 13-08-2005 ರಂದು ಪೊಲೀಸಿನವರು ಸುದರ್ಶನವರನ್ನು ಕರೆದುಕೊಂಡು ನನ್ನ ಅಂಗಡಿಗೆ ಬಂದಿದ್ದರು. ಸುದರ್ಶನವರು ಕಳ್ಳತನ ಮಾಡಿದ ಆಭರಣಗಳನ್ನು ತಂದು ಕೊಟ್ಟಿರುತ್ತಾರೆ ನೀವು ಆಭರಣಗಳನ್ನು ಖರೀದಿ ಮಾಡಿದ್ದೀರಾ ಎಂದು ಕೇಳಿದರು ನಾನು ಅಭರಣಗಳನ್ನು ಖರೀದಿ ಮಾಡಿದ್ದೇನೆ ಎಂದು ಹೇಳಿದೆನು. ನಾನು ಆಭರಣಗಳನ್ನು ಕರಗಿಸಿ ಗಟ್ಟಿ ಮಾಡಿರುತ್ತೇನೆ ಎಂದು ಗಟ್ಟಿಯನ್ನು ನೀಡಿದೆನು. ಅದು 115 ಗ್ರಾಂ ಇತ್ತು. ಪೊಲೀಸಿನವರು ಪಂಚನಾಮೆಯನ್ನು ಮಾಡಿ ಗಟ್ಟಿಯನ್ನು ವಶಕ್ಕೆ ಪಡೆದರು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿದ್ದೆನು. ಪಂಚೆನಾಮೆಯನ್ನು

ಸಾಕ್ಷಿಯವರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದೆ. ಅದು ಯಥಾಪ್ರತಿ ಆಗಿರುವುದರಿಂದ ಸಹಿಯನ್ನು ಗುರುತಿಸಿರುವುದಿಲ್ಲ ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆಯನ್ನು ಮಾಡಿರುತ್ತಾರೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ನೀಡಲಾಯಿತು.

ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಪೊಲೀಸನವರು ಸುದರ್ಶನವರನು ಕರೆದುಕೊಂಡು ಬಂದು ಕೇಳಿದಾಗ 173 ತೂಕವಿರುವ ಒಟ್ಟು 14 ಚಿನ್ನಾಭಾರಣಗಳನ್ನು ನೀವು ನೀಡಿರುವುದಿಲ್ಲ ಎಂದರೆ ಹೌದು. ನೀವು ಚಿನ್ನದ ಗಟ್ಟಿಯನ್ನು ನೀಡಿರುವುದಿಲ್ಲ ಎಂದರೆ ಹೌದು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ಎಸ್ ಜಿ. ವಕೀಲರಿಂದಃ

ಪೊಲೀಸಿನರು ಎಷ್ಟು ಗಟ್ಟಿಗಳನ್ನು ತೆಗೆದುಕೊಂಡು ಹೋದರು ಎಂದರೆ, ಸುಮಾರು ಸಮಯವಾದ್ದರಿಂದ ನಾನು ಗಟ್ಟಿ ಎಂದು ಹೇಳಿದೆನು ಗಟ್ಟಿ ತೆಗೆದುಕೊಂಡು ಹೋಗಿರುವುದಿಲ್ಲ ಆಭರಣಗಳನ್ನು ತೆಗೆದುಕೊಂಡು ಹೋದರು. ಚಿನ್ನಾಭರಣಗಳನ್ನು ಖರೀದಿ ಮಾಡಿದ ಮತ್ತು ಮಾರಾಟ ಮಾಡಿದ ಬಗ್ಗೆ ನಿರ್ವಹಣೆ ಮಾಡುತ್ತೀರಿ ಎಂದರೆ ಇಲ್ಲ. ಯಾರಾದರೂ ಚಿನ್ನಾಭಾರಣಗಳನ್ನು ಮಾರಾಟ ಮಾಡಲು ಬಂದರೆ ಅವರ ವಿಳಾಸ ಮತ್ತು ಅದಕ್ಕೆ ಪೂರಕವಾದ ದಾಖಲೆಗಳನ್ನು ಪಡೆದುಕೊಳ್ಳುತ್ತೀರಿ ಎಂದರೆ ಇಲ್ಲ. ಮಾರಾಟ ಮಾಡಲು ಬರುವ ವ್ಯಕ್ತಿಗಳ ವಿಳಾಸವನ್ನು ಪಡೆಯದೆ ಖರೀದಿ ಮಾಡುವುದು ಅಪರಾದ ಎಂದು

ನಿಮಗೆ ತಿಳಿದಿರುತ್ತದೆ ಅಲ್ಲವೇ ಎಂದರೆ ಅವರು ಮನೆ ನೋಂದಣೆಗೆ ಹಣ ಬೇಕೆಂದು ಹೇಳಿದುದರಿಂದ ತೆಗೆದುಕೊಂಡೆನು. ಚಿನ್ನ ಖರೀದಿ ಮಾಡಿದವರ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುತ್ತೀರಾ ಎಂದರೆ ನನಗೆ ಪರಿಚಿತರಾದ ಜಯಮ್ಮರವರು ನನ್ನ ಚಿಕ್ಕಮ್ಮನವರು ಎಂದು ಆರೋಪಿಯವರು ಹೇಳಿದ್ದರಿಂದ ನಾನು ಖರೀದಿ ಮಾಡಿದೆನು. ನಿಮ್ಮ ಅಂಗಡಿಯಲ್ಲಿ ಎಷ್ಟು ಜನ ಕೆಲಸಗಾರರು ಇದ್ದಾರೆ ಎಂದರೆ ಯಾರೂ ಕೆಲಸಗಾರರು ಇರುವುದಿಲ್ಲ. ನಾನು ಚಿನ್ನದ ಒಡವೆಗಳನ್ನು ರಿಪೇರಿ ಮಾಡುತ್ತೇವೆ ಮಾರಾಟ ಮಾಡುವುದಿಲ್ಲ. ಸುದರ್ಶನವರು ಯಾವ ಉದ್ದೇಶಕ್ಕಾಗಿ ಆಭರಣಗಳನ್ನು ಖರೀದಿ ಮಾಡಿರುತ್ತೀರಿ ಎಂದರೆ ಅವರು ಆಭರಣಗಳನ್ನು ಅಡಮಾನ ಮಾಡಿಕೊಳ್ಳಿ ಎಂದು ಹೇಳಿದ್ದರಿಂದ ತೆಗೆದುಕೊಂಡೆನು. ಚಿನ್ನದ ವರ್ಕ್ ಶಾಪ್ ನಲ್ಲಿ ಯಾರಾದರೂ ಚಿನ್ನವನ್ನು ನೀಡಿದಾಗ ಪರೀಕ್ಷಿಸಿ, ಕರಗಿಸಿ ಆಭರಣಗಳನ್ನು ಮಾಡಿಕೊಡುವುದು ಎಂದರೆ ಸರಿ. ಜಯಮ್ಮರವರು ನನ್ನ ಚಿಕ್ಕಮ್ಮ ಎಂದು ಹೇಳಿ ಅಭರಣಗಳನ್ನು ನೀಡಿದ ವಿಚಾರವನ್ನು ನೀವು ಪೊಲೀಸರಿಗೆ ಹೇಳಿರುತ್ತೀರಾ ಎಂದರೆ ಇಲ್ಲ. ಸುದರ್ಶನರವರಿಂದ ಖರೀದಿ ಮಾಡಿದ ಬಂಗಾರವನ್ನು ಎಷ್ಟು ಸಮಯಗಳ ಕಾಲ ಇಟ್ಟು ಕೊಂಡಿರುತ್ತೀರಿ ಎಂದರೆ ತುಂಬಾ ದಿನಗಳು ಆಗಿರುವುದರಿಂದ ಗೊತ್ತಿಲ್ಲ. ಪೊಲೀಸಿನವರು ಸುಮಾರು 1 ವರುಷದ ನಂತರ ನಿಮ್ಮ ಅಂಗಡಿಗೆ ಬಂದಿರುವುದು ಎಂದರೆ ಸರಿ. ಪೊಲೀಸಿನವರು ಬೆಳಗಿನ ಸಮಯದಲ್ಲಿ ಬಂದಿದ್ದರು. ಪೊಲೀಸನವರು ಸುಮಾರು ಅರ್ಧ ದಿಂದ ಒಂದು ಗಂಟೆ ಕಾಲ ಇದ್ದರು. ಪೊಲೀಸನವರು ಬಂದಾಗ ಸುತ್ತಮುತ್ತಲಿನ ಜನ ಇದ್ದರೇ ಎಂದರೆ ಇಲ್ಲ. ಬಂಗಾರವು ಎಲ್ಲಿ ಇತ್ತು ಎಂದರೆ ಮನೆಯ ಒಳಗೆ ಇದ್ದ ಬೀರುವುವಿನಲ್ಲಿ ಇತ್ತು. ಪೊಲೀಸಿನವರು ನನ್ನನ್ನು ಮತ್ತು ನನ್ನ ತಂದೆಯವರನ್ನು ಠಾಣೆಗೆ ಕರೆದುಕೊಂಡು

ಹೋಗಿದ್ದರು. ಠಾಣೆಯಲ್ಲಿ ಒಪ್ಪಿಕೊಂಡ ನಂತರ ಮನಗೆ ಬಂದು ಆಭರಣಗಳನ್ನು ತಂದು ಕೊಟ್ಟರು. ಸುದರ್ಶನವರು ನಿಮಗೆ ಯಾವುದೇ ಆಭರಣಗಳನ್ನು ನೀಡಿರುವುದಿಲ್ಲ, ಪೊಲೀಸಿನವರು ನಿಮ್ಮ ಬಳಿ ಬಂದಿರುವುದಿಲ್ಲ ಯಾವುದೇ ಆಭರಣಗಳನ್ನು ಕೊಟ್ಟಿರುವುದಿಲ್ಲ, ಪಂಚನಾಮೆಯನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ ಉಡುಪಿ.